ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 320 (205)
ಸದಸ್ಯರ ಹೆಸರು : ಡಾ: ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು
ಉತ್ತರಿಸುವ ದಿನಾಂಕ : 14.12.2021.

ಕ್ರ.ಸಂ.	ಪ್ರಶ್ನೆ	ಉತ್ತರ
ಅ	2014ರಿಂದ ಈವರೆಗೆ ರಾಜ್ಯದಲ್ಲಿ ಸ್ಥಾಪನೆಯಾಗಿರುವ ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳೆಷ್ಟು; ವಹಿವಾಟು ಹಾಗೂ ನೌಕರರೆಷ್ಟು; ಇದರಲ್ಲಿ ಸರ್ಕಾರಿ ಉದ್ದಿಮೆಗಳ ಸಂಖ್ಯೆ ಎಷ್ಟು; ಖಾಸಗಿ ಉದ್ದಿಮೆಗಳೆಷ್ಟು;	2014 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು 288 ಸ್ಥಾಪನೆಯಾಗಿದ್ದು ಈ ಕೈಗಾರಿಕೆಗಳ ವಹಿವಾಟು ರೂ. 399,498 ಕೋಟಿಗಳು ಇದ್ದು, 1,79,130 ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಈ 288 ಕೈಗಾರಿಕೆಗಳು ಖಾಸಗಿ ಉದ್ದಿಮೆಗಳಾಗಿದ್ದು, ಸರ್ಕಾರಿ ಉದ್ದಿಮೆಗಳು ಯಾವುದು ಇರುವುದಿಲ್ಲ.
ಆ	ವಾಯು ಮಾಲಿನ್ಯ ತಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಉತ್ತಮ ಪರಿಸರ ಸೃಷ್ಟಿಗೆ ನೀಡುತ್ತಿರುವ ಕೊಡುಗೆಗಳೇನು;	ಕರ್ನಾಟಕ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಲ್ಲಿಸಿರುವ ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ.
ಇ	ಈ ಉದ್ದಿಮೆಗಳಲ್ಲಿ ಖಾಸಗಿ ಹಾಗೂ ಸರ್ಕಾರಿ ವಲಯಗಳಲ್ಲಿ ಯಾವ ವಿದ್ಯಾರ್ಹತೆಯ ಉದ್ಯೋಗಗಳಿವೆ ಹಾಗೂ ಯಾವ ರೀತಿಯ ವೇತನ ಶ್ರೇಣಿ ಇದೆ;	ಉದ್ದಿಮೆಗಳ ಅವಶ್ಯಕತೆಗನುಗುಣವಾಗಿ ವಿದ್ಯಾರ್ಹತೆಗಳನ್ನು ಘಟಕಗಳು ನಿಗದಿಪಡಿಸಿಕೊಂಡಿರುತ್ತದೆ. ಈ ಉದ್ದಿಮೆಗಳಲ್ಲಿ ಎಸ್.ಎಸ್.ಎಲ್.ಸಿ ಯಿಂದ ಪದವಿ ಮಟ್ಟದವರೆಗೆ ಮತ್ತು ತಾಂತ್ರಿಕ ಕೋರ್ಸ್‌ಗಳನ್ನು ಕಲಿತವರಿಗೂ ಉದ್ಯೋಗಾವಕಾಶ ಒದಗಿಸಲಾಗುವುದು. ಕಾರ್ಮಿಕರ ಕಾಯ್ದೆಗೆ ಅನುಗುಣವಾಗಿ ವೇತನ ಶ್ರೇಣಿ ನಿಗದಿಪಡಿಸಲಾಗುತ್ತದೆ.
ಈ	ಕಾರ್ಮಿಕರ ಆರೋಗ್ಯ ಹಾಗೂ ಕಲ್ಯಾಣ ಕಾರ್ಯಕ್ರಮಗಳು ಯಾವ ರೀತಿ ಇವೆ; ಉದ್ದಿಮೆ ಹಾಗೂ ನೌಕರರ ನಡುವೆ ಸೌಹಾರ್ದತೆ ಹಾಗೂ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಯಾವ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ;	ಕಾರ್ಖಾನೆಗಳ ಕಾಯ್ದೆ 1948ರಡಿ ಕಾರ್ಮಿಕರಿಗೆ ಲಭ್ಯವಾಗುವ ಆರೋಗ್ಯ ಹಾಗೂ ಕಲ್ಯಾಣ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲು ಕಾರ್ಖಾನೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಕಾರ್ಮಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

ಸಿಐ 344 ಎಸ್‌ಪಿಐ 2021

(ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು